ದಿನಾಂಕ 27.03.2019 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಬಿ.ಆರ್. ವಕೀಲರಿಂದ - ಆರೋಪಿ 1 ರಿಂದ 3 ರವರ ಪರವಾಗಿಃ**

15. ಮದುವೆಗಿಂತ ಮೊದಲೇ ಆರೋಪಿಗಳು ನಮ್ಮ ದೂರದ ಸಂಬಂಧಿಕರು ಎಂದರೆ ನನ್ನ ಮಾವನಿಗೆ ಸಂಬಂಧಿಕರಂತೆ ಅಷ್ಟು ಮಾತ್ರ ಗೊತ್ತು. ಮದುವೆಗಿಂತ ಮುಂಚೆಯೇ ಹನುಮಂತರಾಜು ಸರ್ಕಾರಿ ಕೆಲಸದಲ್ಲಿ ಇದ್ದರು ಎನ್ನುವುದು ಸರಿ.

16.ಹನುಮಂತರಾಜುವಿನ ಒಬ್ಬಳೇ ತಂಗಿಗೆ ಆತನ ಮದುವೆಗಿಂತ ಮೊದಲೇ ಮದುವೆ ಮಾಡಿ ಕೊಟ್ಟಿದ್ದು, ಆಕೆ ತನ್ನ ಸಂಸಾರದ ಸಮೇತ ಬೆಂಗಳೂರಿನ ಪಾಪರೆಡ್ಡಿಪಾಳ್ಯದಲ್ಲಿ ವಾಸವಿದ್ದಾಳೆ ಎನ್ನುವುದು ಸರಿ. ಅದೇ ರೀತಿ ತನ್ನ ತಂದೆ-ತಾಯಿಗೆ ಹನುಮಂತರಾಜು ಏಕಮಾತ್ರ ಪುತ್ರ ಎನ್ನುವುದು ಸರಿ.

17.ಆರೋಪಿ-2 ಮತ್ತು 3 ರವರು ಅವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ ಎನ್ನುವುದು ಸರಿ.ಅವರಿಗೆ ಊರಿನಲ್ಲಿ ಸ್ವಂತ ಜಮೀನು, ಸ್ವಂತ ಮನೆ ಮತ್ತು ಹಸು, ಎಮ್ಮೆಗಳಿವೆ ಎನ್ನುವುದು ಸರಿ. ಅವರ ಊರು ಗೊಲ್ಲರಹಟ್ಟಿಯಲ್ಲಿದ್ದು ರಾಮನಗರದಿಂದ ಸುಮಾರು 22 ಕಿ.ಮೀ. ದೂರದಲ್ಲಿದೆ ಎನ್ನುವುದು ನಿಜ.

18.ಮದುವೆಗಿಂತ ಮೊದಲೇ ಹನುಮಂತರಾಜುವಿನ ಕುಟುಂಬದವರ ವಿಷಯ ನಮಗೆ ಮೊದಲೇ ಗೊತ್ತಿತ್ತು ಎನ್ನುವುದು ಸರಿಯಲ್ಲ. ಮದುವೆಗೆ ಲಗ್ನಪತ್ರಿಕೆಯನ್ನು ಆರೋಪಿಗಳೇ ಮಾಡಿಸಿ ಕೊಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಮತ್ತು ಅವರು ಸೇರಿ ಲಗ್ನಪತ್ರಿಕೆ ಮಾಡಿಸಿದ್ದೇವೆ, ಅರ್ಧ ಭಾಗವನ್ನು ಅವರು

ತೆಗೆದುಕೊಂಡಿದ್ದಾರೆ, ಅರ್ಧ ಭಾಗವನ್ನು ನಾವು ತೆಗೆದುಕೊಂಡಿದ್ದೇವೆ ಎಂದು ಉತ್ತರಿಸಿದ್ದಾರೆ.

**19.** ಮದುವೆ ಕಾರ್ಡ್ ನ್ನು ಆರೋಪಿಗಳೇ ಪ್ರಿಂಟ್ ಮಾಡಿಸಿದ್ದರು ಎನ್ನುವುದು ಸರಿಯಲ್ಲ. ನಮಗೆ ಖರ್ಚು ಆಗಬಾರದು ಎಂದು 500 ಕಾರ್ಡ್ ಗಳನ್ನು ನಮಗೆ ಕೊಟ್ಟಿದ್ದರು ಎನ್ನುವುದು ಸರಿಯಲ್ಲ. ನಮ್ಮ ಮಗಳಿಗೆ ಸಂಪ್ರದಾಯವಾಗಿ ಕೊಡಬೇಕಾದ್ದುದ್ದನ್ನು ಕೊಟ್ಟು ಆಕೆಯ ಮದುವೆಯನ್ನು ಕೊಳ್ಳೇನಹಳ್ಳಿಯ ಆಂಜನೇಸ್ವಾಮಿ ದೇವಸ್ಥಾನದಲ್ಲಿ ಮಾಡಿದ್ದೇನೆ ಎನ್ನುವುದು ಸರಿ.

**20.** ನನ್ನ ಮಗಳು ಎಸ್.ಎಸ್.ಎಲ್.ಸಿ. ಉತ್ತೀರ್ಣಳಾಗಿದ್ದಳು. ನನ್ನ ಮಗಳು ಗಂಡನ ಮನೆಗೆ ಹೋದ ಸಂದರ್ಭದಲ್ಲಿ ನನ್ನ ಅಳಿಯ ಆಕೆಯ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ತೆಗೆದುಕೊಂಡು ಹೋಗಿದ್ದ ಎನ್ನುವುದು ಸರಿ. ಆಕೆಯನ್ನು ಹೆಚ್ಚು ಓದಿಸ ಬೇಕು ಎಂದು ಅಂಕಪಟ್ಟಿಯನ್ನು ನನ್ನ ಅಳಿಯ ತೆಗೆದುಕೊಂಡು ಹೋಗಿದ್ದ ಎನ್ನುವುದು ಸರಿಯಲ್ಲ.

**21.** ನನ್ನ ಅಳಿಯ ಸರ್ಕಾರಿ ಕೆಲಸದಲ್ಲಿ ಇದ್ದುದ್ದರಿಂದ ತನ್ನ ಸೇವಾ ಪುಸ್ತಕದಲ್ಲಿ ತನ್ನ ತಾಯಿಯನ್ನು ನಾಮನಿರ್ದೇಶಿತ ವ್ಯಕ್ತಿಯನ್ನಾಗಿ

ಮಾಡಿದ್ದ ಎನ್ನುವುದು ಸರಿ. ಮದುವೆಯಾದ ನಂತರ ತನ್ನ ತಾಯಿಯನ್ನು ತೆಗೆದು ನನ್ನ ಮಗಳನ್ನು ನಾಮನಿರ್ದೇಶಿತ ವ್ಯಕ್ತಿಯನ್ನಾಗಿ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ.

**22.** ಮದುವೆಯಾದ ನಂತರ ಸುಮಾರು 9 ತಿಂಗಳು ನನ್ನ ಮಗಳು ತನ್ನ ಗಂಡನ ಮನೆಯಲ್ಲಿ ಇದ್ದಳು ಎಂದರೆ ಸುಮಾರು ಒಂದು ವರ್ಷಗಳ ಕಾಲ ಇದ್ದಳು. ಆಕೆ 9 ತಿಂಗಳಿನ ಗರ್ಭಿಣಿಯಾಗಿದ್ದಾಗ ನಾನು ಮತ್ತು ನನ್ನ ಗಂಡ ಅಳಿಯನ ಮನೆಗೆ ಬಂದು ಆಕೆಯನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿದ್ದೇವೆ ಎನ್ನುವುದು ಸರಿ. ಆ ರೀತಿ ಕಳುಹಿಸಿ ಕೊಡುವಾಗ ಆರೋಪಿಗಳೇ ನನ್ನ ಮಗಳಿಗೆ ಸಂಪ್ರದಾಯದಂತೆ ಸೀಮಂತ ಮಾಡಿ ಕಳುಹಿಸಿಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಗೊಲ್ಲರದೊಡ್ಡಿಯಲ್ಲಿ ನಾವೇ ಸೀಮಂತ ಮಾಡಿದ್ದೇವೆ ಎಂದು ಉತ್ತರಿಸಿದ್ದಾರೆ. ಗೊಲ್ಲರದೊಡ್ಡಿಯಲ್ಲಿ ಆರೋಪಿಗಳೇ ಸೀಮಂತ ಮಾಡಿದ್ದರೂ ಕೂಡ ನಾವು ಸೀಮಂತ ಮಾಡಿದ್ದೇವೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**23.** ಸಂಪ್ರದಾಯದಂತೆ ಗಂಡನ ಮನೆಯವರು ಸೀಮಂತ ಮಾಡಬೇಕು ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಸಂಪ್ರದಾಯದಂತೆ ನಾವು

ಮಾಡುವುದಿಲ್ಲ, ನೀವು ಮಾಡಿ ಎಂದು ನಮಗೆ ತಿಳಿಸಿದ್ದಾರೆ ಎಂದು ಉತ್ತರಿಸಿದ್ದಾರೆ. ಸಂಪ್ರದಾಯದಂತೆ ನನ್ನ ಅಳಿಯ ಮತ್ತು ಆತನ ಮನೆಯವರು ಸೀಮಂತ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಆ ರೀತಿ ಸೀಮಂತ ಮಾಡಿದ್ದೇವೆ ಎಂದು ತೋರಿಸಲು ನಮ್ಮ ಬಳಿ ದಾಖಲೆಗಳಿವೆ. ಅವುಗಳನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇರುವುದಿಲ್ಲ.

**24.** ಮದುವೆಯಾದ ನಂತರ ನಾನು, ನನ್ನ ಗಂಡ ಮತ್ತು ಮನೆಯವರು ಮಗಳ ಮನೆಗೆ ಹೋಗುತ್ತಿದ್ದೆವು ಮತ್ತು ಅದೇ ರೀತಿ ನಮ್ಮ ಅಳಿಯ ಮತ್ತು ಆತನ ಮನೆಯವರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಎನ್ನುವುದು ಸರಿ. ಆ ರೀತಿ ನಾವು ಹೋದಾಗ ನಾನು, ನನ್ನ ಗಂಡ ಮತ್ತು ನನ್ನ ಗಂಡು ಮಕ್ಕಳು ಅವರ ಮನೆಯಲ್ಲಿ ಒಂದೆರೆಡು ದಿವಸ ಇದ್ದು ಬರುತ್ತಿದ್ದೆವು ಮತ್ತು ಅದೇ ರೀತಿ ಆರೋಪಿಗಳು ಕೂಡ ನಮ್ಮ ಮನೆಗೆ ಬಂದು ಒಂದೆರೆಡು ದಿವಸ ಇದ್ದು ಹೋಗುತ್ತಿದ್ದರು.

**25.** ಬಿಡುವಿದ್ದಾಗ ನಾನು ಮತ್ತು ನನ್ನ ಗಂಡ ಗೊಲ್ಲರದೊಡ್ಡಿಗೆ ಹೋಗಿ ಕಣ ಮಾಡಲು ಆರೋಪಿಗಳಿಗೆ ಸಹಾಯ ಮಾಡುತ್ತಿದ್ದೆವು ಎನ್ನುವುದು ಸರಿ. ಅದೇ ರೀತಿ ನನ್ನ ಅಳಿಯ ನಮ್ಮ ಮನೆಗೆ ಬಂದಾಗ ವ್ಯವಸಾಯದ ಕೆಲಸದಲ್ಲಿ ಭಾಗಿಯಾಗುತ್ತಿದ್ದ ಎನ್ನುವುದು ಸರಿಯಲ್ಲ.

**26.**ನನ್ನ ಮಗಳು ಗಂಡನ ಮನೆಯಲ್ಲಿದ್ದಾಗ ಲಕ್ಷ್ಮೀಪುರದಲ್ಲಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸುತ್ತಿದ್ದರು ಎಂದು ಉತ್ತರಿಸಿದ್ದಾರೆ.

**27.**ನಮ್ಮ ಊರಿನಿಂದ ತುಮಕೂರಿಗೆ ಹೋಗಬೇಕಾದರೆ ಬಸ್ಸಿಗೆ 10 ರೂಪಾಯಿ ಚಾರ್ಜ್. ನಮ್ಮ ಊರಿನಿಂದ ತುಮಕೂರಿಗೆ ಸುಮಾರು 5 ಕಿ.ಮೀ. ದೂರ ಎಂದರೆ ಇರಬಹುದು. ನಮ್ಮ ಮಗಳಿಗೆ ನಾವು ಹೆರಿಗೆಗಾಗಿ ತುಮಕೂರಿನ ನರ್ಸಿಂಗ್ ಹೋಮ್‌ಗೆ ಸೇರಿಸಿದ್ದೆವು ಎನ್ನುವುದು ಸರಿ. ಅಲ್ಲಿ ಹೆರಿಗೆಯಾದಾಗ ಮಗುವಿನ ಹೃದಯದಲ್ಲಿ ತೂತುಗಳಿವೆ ಎಂಬ ವಿಚಾರ ಗೊತ್ತಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಬಾಣಂತನದ 9 ತಿಂಗಳ ನಂತರ ಗೊತ್ತಾಗಿದೆ ಎಂದು ಉತ್ತರಿಸಿದ್ದಾರೆ. ಬಾಣಂತನಕ್ಕಾಗಿ ಸುಮಾರು 9 ತಿಂಗಳು ನನ್ನ ಮಗಳು ನನ್ನ ಮನೆಯಲ್ಲಿ ಇದ್ದಳು.

**28.**ಬಾಣಂತನದ ಖರ್ಚಿಗಾಗಿ ನಾವೇ ಕೊಟ್ಟಿದ್ದ ಚೈನನ್ನು ಆರೋಪಿ ಮಾರಾಟ ಮಾಡಿ ಬಂದ ಹಣವನ್ನು ನಮಗೆ ಕೊಟ್ಟಿದ್ದ ಎನ್ನುವುದು ಸುಳ್ಳು. 9 ತಿಂಗಳ ನಂತರ ನನ್ನ ಅಳಿಯ ಬಂದು ನನ್ನ ಮಗಳು ಮತ್ತು ಮೊಮ್ಮಗಳನ್ನು ಕರೆದುಕೊಂಡು ಹೋಗಿದ್ದಾನೆ ಎನ್ನುವುದು ಸರಿಯಲ್ಲ.

ಸರೋಜಮ್ಮ ಮತ್ತು ಆಕೆಯ ಮಗಳು ಬಂದು ನನ್ನ ಮಗಳನ್ನು ಕರೆದುಕೊಂಡು ಹೋಗಿದ್ದಾರೆ.

**29.** ಮಗುವಿಗೆ ಹಾಲು ಸಾಕಾಗುವುದಿಲ್ಲ ಎಂದು ನಮ್ಮ ಮನೆಯಲ್ಲಿದ್ದ ಹಸುವನ್ನು ನನ್ನ ಅಳಿಯ ರೂ.16,000/- ಕ್ಕೆ ಖರೀದಿ ಮಾಡಿದ್ದಾನೆ ಎನ್ನುವುದು ಸುಳ್ಳು. ಸಾಕ್ಷಿ ಸ್ವತಃ ಮಗುವಿಗೆ ಹಾಲು ಸಾಕಾಗುವುದಿಲ್ಲ ಎಂದು ನಾವೇ ಕಳುಹಿಸಿಕೊಟ್ಟಿದ್ದೇವೆ ಎಂದು ಉತ್ತರಿಸಿದ್ದಾರೆ. ನನ್ನ ಗಂಡ ರೂ.16,000/- ಕ್ಕೆ ಹಸುವನ್ನು ನನ್ನ ಅಳಿಯನಿಗೆ ಮಾರಾಟ ಮಾಡಿದ್ದರೂ ಕೂಡ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳಿದ್ದೇ ಎನ್ನುವುದು ಸರಿಯಲ್ಲ.

**30.** ಮಗುವಿನ ಹೃದಯದಲ್ಲಿ ತೊಂದರೆ ಇದೆ ಎಂದು ವೈದ್ಯರಿಗೆ ತೋರಿಸಿದ ನಂತರ ನನ್ನ ಮಗಳು ಫೋನ್ ಮಾಡಿ ನನಗೆ ತಿಳಿಸಿದ್ದಾಳೆ. 10 ತಿಂಗಳಿನ ಮಗುವನ್ನು ನನ್ನ ಅಳಿಯ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದ್ದಾನೆ ಎನ್ನುವುದು ಸರಿ. ಸುಮಾರು 8-9 ದಿವಸಗಳ ಕಾಲ ಮಗುವನ್ನು ಒಳರೋಗಿಯಾಗಿ ಜಯದೇವ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು ಮತ್ತು ಆ ಸಂದರ್ಭದಲ್ಲಿ ನಾನು, ನನ್ನ ಮಗಳು ಮತ್ತು ಅಳಿಯ ಆಸ್ಪತ್ರೆಯಲ್ಲಿಯೇ ಇದ್ದೆವು ಎನ್ನುವುದು ಸರಿ.

**31.**ನನ್ನ ಅಳಿಯ ರೂ.40 ರಿಂದ 50 ಸಾವಿರ ಖರ್ಚು ಮಾಡಿ ಮಗುವಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿದ್ದಾನೆ ಎಂಬ ಪ್ರಶ್ನೆಗೆ ಸಾಕ್ಷಿಯು ಆತ ಒಬ್ಬನೇ ಮಾಡಿಸಿಲ್ಲ, ಬೆಂಗಳೂರಿನಲ್ಲಿರುವ ಟೆಂಪೋ ಓಡಿಸುವ ನನ್ನ ಮಗ ಮಂಜುನಾಥ ಕೂಡ ಅರ್ಧ ಹಣವನ್ನು ಕೊಟ್ಟಿದ್ದಾನೆ ಎಂದು ಉತ್ತರಿಸಿದ್ದಾರೆ. ಅರ್ಧ ಹಣವನ್ನು ನನ್ನ ಮಗ ಕೊಟ್ಟಿರುವ ಕುರಿತು ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಬರೆದು ಮಡಗಿದ್ದೀವಿ ಎಂದು ಉತ್ತರಿಸಿದ್ದಾರೆ. ಅದು ಡೈರಿಯಲ್ಲಿದೆ. ಆ ಡೈರಿಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಬೇಕಾದರೆ ಕೊಡುತ್ತೇನೆ.

**32.**ಅರ್ಧ ಖರ್ಚನ್ನು ನನ್ನ ಮಗ ಭರಿಸಿಲ್ಲ ಎನ್ನುವುದು ಸರಿಯಲ್ಲ. ಖರ್ಚನ್ನು ನನ್ನ ಅಳಿಯನೇ ಭರಿಸಿ ಆನಂತರ ಆತ ಸರ್ಕಾರಿ ನೌಕರನಾದ್ದರಿಂದ ಪುನರ್ ಭರಿಸಿಕೊಂಡಿದ್ದಾನೆ ಎನ್ನುವುದು ಸರಿಯಲ್ಲ.

**33.**ಸುಮಾರು 15 ದಿವಸಗಳ ಕಾಲ ರಜೆ ಹಾಕಿ ನನ್ನ ಅಳಿಯ ನನ್ನ ಮೊಮ್ಮಗಳಿಗೆ ಚಿಕಿತ್ಸೆಯನ್ನು ಕೊಡಿಸಿದ್ದ ಎಂದರೆ ಬಂದು ಹೋಗಿ ಮಾಡುತ್ತಿದ್ದ. ಆಗ 1 ನೇ ಆರೋಪಿಗೆ ಯಾವುದೇ ದ್ವಿಚಕ್ರ ವಾಹನ ಇರಲಿಲ್ಲ ಎನ್ನುವುದು ಸರಿ.

**34.**ಗೊಲ್ಲರದೊಡ್ಡಿ ಅರಣ್ಯ ಪ್ರದೇಶದಲ್ಲಿರುವ ಒಂದು ಊರು ಎನ್ನುವುದು ಸರಿ. ರಾಮನಗರವನ್ನು ಹೊರತು ಪಡಿಸಿದರೆ ಗೊಲ್ಲರದೊಡ್ಡಿಯಲ್ಲಿ ಬೇರೆ ಉತ್ತಮವಾದ ಆಸ್ಪತ್ರೆ ಇಲ್ಲ ಎನ್ನುವುದು ಸರಿ.

**35.**ಜಯದೇವ ಆಸ್ಪತ್ರೆಯಿಂದ ಮಗುವನ್ನು ಬಿಡುಗಡೆ ಮಾಡುವ ದಿವಸ ನಾನು, ನನ್ನ ಗಂಡ, ಅಳಿಯ ಮತ್ತು ಮುಂತಾದವರು ಇದ್ದೆವು ಎನ್ನುವುದು ಸರಿ. ಆ ರೀತಿ ಬಿಡುಗಡೆ ಮಾಡುವಾಗ ವಾರಕ್ಕೆ ಒಂದು ಸಲ ತಪಾಸಣೆಗೋಸ್ಕರ ಮಗುವನ್ನು ಕರೆದುಕೊಂಡು ಬರಬೇಕು ಎಂದು ವೈದ್ಯರು ತಿಳಿಸಿದ್ದಾರೆ ಎನ್ನುವುದು ಸರಿ. ಸಾಕ್ಷಿ ಸ್ವತಃ ಈಗಲೂ ಕೂಡ 6 ತಿಂಗಳಿಗೆ ಒಂದು ಸಲ ಮಗುವನ್ನು ತಪಾಸಣೆಗೋಸ್ಕರ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಉತ್ತರಿಸಿದ್ದಾರೆ.

**36.**ಆ ರೀತಿ ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ತಪಾಸಣೆಗೆ ಬೆಂಗಳೂರಿಗೆ ಕರೆದುಕೊಂಡು ಹೋಗಲು ಗೊಲ್ಲರದೊಡ್ಡಿಯ ಬದಲಾಗಿ ನಮ್ಮ ಊರೇ ಉತ್ತಮ ಎಂದು ಮಗುವನ್ನು ಮತ್ತು ತಾಯಿಯನ್ನು ನಮ್ಮ ಮನೆಗೆ ಕರೆದುಕೊಂಡು

ಹೋಗುತ್ತೇವೆ ಎಂದು ಕೇಳಿದೆವು ಎನ್ನುವುದು ಸರಿ. ಆದರೆ ಅವರು ಒಪ್ಪಲಿಲ್ಲ, ಕರೆದುಕೊಂಡು ಹೋದರು.

**37.** ಶಸ್ತ್ರಚಿಕಿತ್ಸೆಯಾದ್ದರಿಂದ ಮಗುವಿಗೆ ರಾತ್ರಿ ಜ್ವರ ಬರುತ್ತಿದೆ ಎಂಬ ವಿಚಾರವನ್ನು ನನ್ನ ಮಗಳು ನನಗೆ ತಿಳಿಸಿದ್ದಳು ಎನ್ನುವುದು ಸರಿ. ಈ ಊರಿನಲ್ಲಿ ಏನು ಸಿಗುತ್ತಿಲ್ಲ, ರಾತ್ರಿ ವೈದ್ಯರು ಯಾರು ಸಿಗುವುದಿಲ್ಲ ಎಂದು ನನ್ನ ಮಗಳು ನೊಂದುಕೊಳ್ಳುತ್ತಿದ್ದಳು ಎನ್ನುವುದು ಸರಿ. ಆ ಊರಿನಲ್ಲಿ ಇದ್ದರೆ ತೊಂದರೆ ಎಂದು ನನ್ನ ಮಗಳು ಹೇಳುತ್ತಿದ್ದಳು ಎನ್ನುವುದು ನನಗೆ ಗೊತ್ತಿಲ್ಲ.

**38.** ಆ ರೀತಿ ಮಗುವಿನ ಹೃದಯದಲ್ಲಿ ತೂತುಗಳಿವೆ ಎಂಬ ವಿಚಾರ ಗೊತ್ತಾದ ನಂತರ ನನ್ನ ಮಗಳು ನೊಂದುಕೊಳ್ಳುತ್ತಿದ್ದಳು ಎನ್ನುವುದು ಸರಿ. ಮಗುವಿಗೆ ತೊಂದರೆಯಾಗಿದೆ ಎಂದು ನನ್ನ ಮಗಳು ಮೊದಲಿನಂತೆ ಸಂತೋಷದಿಂದ ಇರಲಿಲ್ಲ ಎನ್ನುವುದು ಸರಿ.

**39.** ನನ್ನ ಅಳಿಯನಿಗೆ ಬಿಡದಿಯ ಕೆಎಸ್‌ಆರ್‌ಟಿಸಿಯಲ್ಲಿ ಕೆಲಸ ಇತ್ತು ಎನ್ನುವುದು ಸರಿ. ನನ್ನ ಅಳಿಯನಿಗೆ ಬಿಡದಿಯಲ್ಲಿ ವಸತಿ ಗೃಹ ಕೊಡುತ್ತಾರೆ, ಅಲ್ಲಿ ವಾಸ ಇರಬೇಕು ಎಂಬ ಆಸೆ ನನ್ನ ಮಗಳಿಗೆ ಇತ್ತು ಎನ್ನುವುದು ಸರಿಯಲ್ಲ.

**40.**ಮದುವೆಯಾದ ನಂತರ 10 ತಿಂಗಳುಗಳ ಕಾಲ ನಿಮ್ಮ ಮಗಳು ಗಂಡನ ಜೊತೆಯಲ್ಲಿ ಸಂಸಾರ ಮಾಡಿದ್ದಾಳೆ ಎಂಬ ಪ್ರಶ್ನೆಗೆ ಸಾಕ್ಷಿಯು ಮಗುವಾದ ನಂತರ 10 ತಿಂಗಳುಗಳ ಕಾಲ ಸಂಸಾರ ನಡೆಸಿದ್ದಾಳೆ ಎಂದು ಉತ್ತರಿಸಿದ್ದಾರೆ. ಮದುವೆಯಾದ ನಂತರ ಗಂಡ ಹೆಂಡತಿ ಅನ್ಯೋನ್ಯತೆಯಿಂದ ಇದ್ದುದ್ದರಿಂದಲೇ ಮಗು ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲಿಗೆ ಅನ್ಯೋನ್ಯತೆಯಿಂದ ಇದ್ದರು, ಆನಂತರ ಹೆಣ್ಣು ಮಗು ಆಯಿತು, ವರದಕ್ಷಿಣೆ ಹಣ ಬೇಕು ಎಂದು ಹಿಂಸೆ ಕೊಟ್ಟಿದ್ದಾರೆ ಎಂದು ಉತ್ತರಿಸಿದ್ದಾರೆ.

**41.**ಹೆಣ್ಣು ಮಗು ಆಯಿತು ಎಂದು ಹಿಂಸೆ ಕೊಟ್ಟಿದ್ದಾರೆ ಎಂದು ಇದೇ ಮೊದಲ ಬಾರಿಗೆ ತಿಳಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.